



ಗ್ರೀಕ್ ಪುರಾಣದಲ್ಲಿ ಎಲ್ಲ ದೇವರುಗಳು ಹಾಗೂ ಮಾನವರ ಅಧಿಪತಿಯಾದ ದೇವ ಜ್ಯೂಸ್‌ನ ಪವಿತ್ರ ಸ್ಥಳವಾದ ಒಲಿಂಪಿಯಾದಲ್ಲಿ 2500 ವರ್ಷಗಳ ಹಿಂದೆ ಇದ್ದ ದೇವಾಲಯದ ಇಂದಿನ ಅವಶೇಷಗಳು. ಒಳಚಿತ್ರಗಳು: ಕಂಪ್ಯೂಟರ್ ಕೃತಕ ಬುದ್ಧಿಮತ್ತೆ ಬಳಸಿ ರೂಪಿಸಿರುವ ಜ್ಯೂಸ್‌ನ ಮಂದಿರ ಹಾಗೂ ಪ್ರಾಚೀನ ಜಗತ್ತಿನ ಏಳು ಅದ್ಭುತಗಳಲ್ಲಿ ಒಂದಾಗಿದ್ದ ಕಲಾವಿದನ ಕಲ್ಪನೆಯ ಜ್ಯೂಸ್ ದೇವನ ಪ್ರತಿಮೆ

# ಒಲಿಂಪಿಯಾ ಒಲಿಂಪಿಯಾ...

## ಬದುಕಿನ ಓಟದೊಂದಿಗೆ ಆಟದ ಘನತೆಯ ಸಮನ್ವಯ

**ಮನುಷ್ಯ ಕುಲವನ್ನು ಬೆಸೆಯುವ ಸಂಗತಿಗಳಲ್ಲಿ ಮುಖ್ಯಪಾತ್ರ ವಹಿಸುವ ಒಲಿಂಪಿಕ್ ಕ್ರೀಡೆಗಳ ಹುಟ್ಟು ಹಾಗೂ ಇತಿಹಾಸ ಮನುಕುಲದ ಚರಿತ್ರೆಯಷ್ಟೇ ರೋಚಕ ಹಾಗೂ ಸಮೃದ್ಧ. ಗ್ರೀಕ್ ನಾಗರಿಕತೆ ಹಾಗೂ ಸಂಸ್ಕೃತಿಯ ಉತ್ಕರ್ಷದಂತೆ ಕಾಣಿಸುವ ಒಲಿಂಪಿಯಾದ ಕ್ರೀಡಾಚರಿತ್ರೆಯ ಪಕ್ಷಿನೋಟ 'ಒಲಿಂಪಿಕ್ಸ್' ಸಂದರ್ಭದಲ್ಲಿ ಓದುಗರಿಗೆ 'ಸುಧಾ' ಉಣಿಸುತ್ತಿರುವ ರಸಕವಳ.**

■ ಡಾ. ಜೆ. ಬಾಲಕೃಷ್ಣ



ಜಿಮ್ನೇಸಿಯಂನ ಕಟ್ಟಡದ ಸಾಲು ಕಂಬಗಳು ಹಾಗೂ ಅದಕ್ಕೆ ಹೊಂದಿಕೊಂಡಂತೆ ಕ್ರೀಡಾಪಟುಗಳು ಉಳಿದುಕೊಳ್ಳಲು ನಿರ್ಮಿಸಿದ್ದ ಕೋಣೆಗಳು